ನೆಲಮಂಗಲ ಪಟ್ಟಣದಲ್ಲಿ ವಾಹನಗಳ ಸಂಚಾರದ ವ್ಯವಸ್ಥೆ

1164 (1527) ಶ್ರೀ ಆಂಜನಮೂರ್ತಿ (ನೆಲಮಂಗಲ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ಪಟ್ಟಣದ ಮೂಲಕ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ-4 ರಲ್ಲಿ ರಾಜ್ಯದ ಸುಮಾರು 27 ಜಿಲ್ಲೆಗಳಿಗೆ ವಾಹನ ಸಂಚಾರವು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸಂಚಾರ ನಿಯಂತ್ರಣದ ಸುವ್ಯವಸ್ಥೆ ಬಗ್ಗೆ ಅತ್ಯವಶ್ಯಕವಾದ ಸಂಚಾರ ಪೋಲೀಸ್ ವ್ಯವಸ್ಥೆಯನ್ನು ಮತ್ತು (ಸಿಗ್ನಲ್ ಲೈಟ್ಸ್) ನಿಶಾನ್ ದೀಪಗಳನ್ನು ಒದಗಿಸಲು ಸರ್ಕಾರ ಜರೂರು ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ) ಹೌದು

ಆ) ನೆಲಮಂಗಲ ಪೋಲೀಸ್ ಠಾಣಾ ವ್ಯಾಪ್ತಿಯೊಳಗೆ ಸಂಚಾರದ ಪೋಲೀಸ್ ಠಾಣೆ ತೆರೆಯುವ ಬಗ್ಗೆ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. ನೆಲಮಂಗಲ ಪಟ್ಟಣ ವ್ಯಾಪ್ತಿಯಲ್ಲಿ ಒಂದು ಸಂಚಾರ ಉಕ್ಕಡ ಠಾಣೆಯು ನಿರ್ವಹಿಸುತ್ತಿದ್ದು, ಒಂದು ಆಂಬುಲೆನ್ಸ್ ವೈರ್‌ಲೆಸ್ ಸೆಟ್ ಸಂಪರ್ಕ ಹೊಂದಿದ್ದು, ಅಪಘಾತಕ್ಕೊಳಗಾದಾಗ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಗಾಯಾಳುಗಳಿಗೆ ಸಹಾಯ ಹಾಗು ಚಿಕಿತ್ಸೆಗೆ ವ್ಯವಸ್ಥೆ ಮಾಡುವುದು.

ಸಿಗ್ನಲ್ ಲೈಟ್ಸ್ ವ್ಯವಸ್ಥೆಯನ್ನು ಒದಗಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇಲ್ಲ.

ಕರ್ನಾಟಕ ವಿದ್ಯುತ್ ನಿಗಮದಲ್ಲಿ SC,ST ನೌಕರರು

1167 ಶ್ರೀ ಅಂಗಾರ್.ಎಸ್(ಸೂಳ್ಯ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997 ರಿಂದ 2000 ರವರೆಗೆ ಕರ್ನಾಟಕ ವಿದ್ಯುತ್ ನಿಗಮದಲ್ಲಿ ಎಷ್ಟು ಜನ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಇದರಲ್ಲಿ ಎಷ್ಟು ಜನ ನೌಕರರು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದವರು; ಹುದ್ದೆವಾರು ವಿವರ ನೀಡುವುದು;

ಆ) ನಿಗಮದಲ್ಲಿ ಪರಿಶಿಷ್ಟ ಜಾತಿ ವರ್ಗದ ನೌಕರರಿಗೆ ಮೀಸಲಾತಿ ನಿಯಮದ ಪ್ರಕಾರ ಶೇಕಡಾ ಎಷ್ಟು ಪ್ರಾತಿನಿಧ್ಯ ಕೊಡಬೇಕಿತ್ತು; ಹಾಗೂ ಎಷ್ಟು ಕೊಡಲಾಗಿದೆ? (ಹುದ್ದೆವಾರು ವಿವರ ನೀಡುವುದು)

ಶ್ರೀ ವೀರ ಕುಮಾರ್ ಆ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಕರ್ನಾಟಕ ವಿದ್ಯುತ್ ನಿಗಮದಲ್ಲಿ 1997 ರಿಂದ 2000 ರವರೆಗೆ ನೌಕರರ ಸಂಖ್ಯೆ ಮತ್ತು ಅವರಲ್ಲಿ ಎಸ್.ಸಿ : ಎಸ್.ಟಿ ನೌಕರರ ಸಂಖ್ಯೆ ಈ ಕೆಳಗಿನಂತಿವೆ.